**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ:ಸಿ4(7)ಪ್ರಾ & ಪ್ರೌ ಶಾ ಶಿ ವರ್ಗ 55 /2011-12 ದಿ: 12-07-2011.

**ಸುತ್ತೋಲೆ**

ವಿಷಯ: 2011-12ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಗಣಕ ಯಂತ್ರ ವ್ಯವಸ್ಥೆ ಮೂಲಕ ಈಗಾಗಲೇ ಆಯಾ ವರ್ಗಾವಣಾ ಪ್ರಾಧಿಕಾರಿಗಳು ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ವರ್ಗಾವಣೆ ಮಾರ್ಪಾಡು/ಬದಲಾವಣೆ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007,ದಿ:01.09.2007
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007,ದಿ:15.10.2007
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007,ದಿ:14.11.2007
4. ಸರ್ಕಾರದ ಆದೇಶ ಸಂಖ್ಯೆ: ಇಡಿ 7 ಇಟಿಆರ್ 2011, ದಿ.20.04.2011
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ. 37 ಇಟಿಆರ್.2009 ದಿ:23.04.2011
6. ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ; ಸಿ4[7] ಪ್ರಾ ಶಾ ಶಿ ವರ್ಗ 55 /2011-12 ದಿ: 27.04.2011

--000--

2011-12ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಗಣಕ ಯಂತ್ರ ವ್ಯವಸ್ಥೆ ಮೂಲಕ ಈಗಾಗಲೇ ಆಯಾ ವರ್ಗಾವಣಾ ಪ್ರಾಧಿಕಾರಿಗಳು ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ. ವರ್ಗಾವಣೆಯ ಪ್ರಕ್ರಿಯೆಯು ಮುಗಿದ ನಂತರ ಕೆಲವು ಶಿಕ್ಷಕರುಗಳು ವರ್ಗಾವಣೆ ಮಾರ್ಪಾಡು / ಬದಲಾವಣೆ ಮಾಡಲು ಮನವಿಗಳನ್ನು ಸಲ್ಲಿಸುತ್ತಿದ್ದು, ಈ ಬಗ್ಗೆ ಯಾವುದೇ ವರ್ಗಾವಣೆ ಮಾರ್ಪಾಡು / ಬದಲಾವಣೆ ಮಾಡುವುದು ನಿಯಮ ಬಾಹಿರವಾಗಿರುತ್ತದೆ. ಸಂಬಂಧಿಸಿದ ನಿಮ್ಮ ಆಯುಕ್ತಾಲಯ / ವಿಭಾಗ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ಅಂತಹ ಮನವಿಗಳು ಬಂದಿದ್ದಲ್ಲಿ ಸದರಿ ಮನವಿಗಳನ್ನು ಪರಿಗಣಿಸಲು ಅವಕಾಶವಿಲ್ಲದಿರುವುದರಿಂದ ತಿರಸ್ಕರಿಸಲು ತಿಳಿಸಿದೆ. ಒಂದು ವೇಳೆ ನಿಯಮ ಉಲ್ಲಂಘಿಸಿ ವರ್ಗಾವಣೆ ಮಾರ್ಪಾಡು / ಬದಲಾವಣೆ ಮಾಡಿದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದೆಂದು ತಿಳಿಸಿದೆ

[ಆಯುಕ್ತರ ಕಛೇರಿಯ ಟಿಪ್ಪಣಿ ಮೇರೆಗೆ]

12-07-11

ನಿರ್ದೇಶಕರು (ಪ್ರೌಢಶಿಕ್ಷಣ)

ಇವರಿಗೆ:-

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)

ಪ್ರತಿಯನ್ನು:-

2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,ಧಾರವಾಡ /ಗುಲ್ಬರ್ಗಾ
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು
4. ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಧಾರವಾಡ /ಗುಲ್ಬರ್ಗಾ
5. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಚೇರಿ, ಬೆಂಗಳೂರು,
6. ಸಹನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಧಾರವಾಡ /ಗುಲ್ಬರ್ಗಾ
7. ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು / ಮೈಸೂರು

8 ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಚೇರಿ, ಬೆಂಗಳೂರು,

8. ಕಛೇರಿಪ್ರತಿ. \\3-server\typing3\E\EST4\6871 13.doc